**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 19-03-2024.</u>**

**<u>ಪಾಟೀ ಸವಾಲುಃ 1 ರಿಂದ 4ನೇ ಪ್ರತಿವಾದಿ ಪರ ಶ್ರೀ.ಎಮ್ ಎಸ್ ಡಿ ವಕೀಲರಿಂದಃ</u>**

1. ನಾನು ಹಾಗೂ ನನ್ನ ತಾಯಿ ವಕೀಲರಿಗೆ ಈ ದಾವೆಯನ್ನು ಹಾಕಲು ಮಾಹಿತಿಯನ್ನು ಕೊಟ್ಟಿದ್ದೆವು. ನಮ್ಮ ತಂದೆಗೆ ನಾವು ವಾದಿಯರು ಬಿಟ್ಟು ಬೇರೆ ವಾರಸುದಾರರು ಇರುವುದಿಲ್ಲ. ನಮ್ಮ ತಂದೆಗೆ ನಾರಾಯಣ ಎಂದು ಸಹ ಕರೆಯಲಾಗುತ್ತಿತ್ತು. ನಮ್ಮ ತಂದೆ ಮೊದಲು ಬೆಳಗಾವಿಯಲ್ಲಿ ವಾಸ ಇದ್ದರು ನಂತರ ದಾರವಾಡದಲ್ಲಿ ವಾಸ ಇದ್ದರು ನಾನು ನೌಕರಿ ಸಲುವಾಗಿ ಮುಂಬೈ ಹಾಗೂ ಪುಣೆ ಯಲ್ಲಿ ಇರುತ್ತಿದ್ದೆ ಈಗ ನಾನು ಪುಣೆಯಲ್ಲಿ ವಾಸ ಇದ್ದೇನೆ. ನಮ್ಮ ತಂದೆ ಮಹಾರಾಷ್ಟ್ರ ರಾಜ್ಯದ PWD ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ತಂದೆ 1964 ರಲ್ಲಿ ಸೇವೆಯಲ್ಲಿ ಭರ್ತಿಯಾಗಿ ಸುಮಾರು 2000 ಇಸ್ವಿಯಲ್ಲಿ ಅವರು ಸೇವೆಯಿಂದ ನಿವೃತ್ತಿ ಹೊಂದಿದ್ದರು. ನಮ್ಮ ತಂದೆ ತೀರಿಕೊಂಡ ನಂತರ ಅವರ ಸೇವೆಯ ಪಿಂಚಣಿ ನಮ್ಮ ತಾಯಿಗೆ ಬರುತ್ತದೆ.

2. ನಮ್ಮ ಅಜ್ಜನ ಹೆಸರು ಬಿಕಾಜಿ @ ಬಾಬುರಾವ ಲಕ್ಷ್ಮಣ ಕುಲಕರ್ಣಿ. ನಮ್ಮ ಅಜ್ಜ ಬಿಕಾಜಿ ರವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅವರ ಹೆಸರುಗಳು ಕುಸುಮ ಹಾಗೂ ಸ್ವರೂಪ.

ಕುಸುಮ ಹಾಗೂ ಸ್ವರೂಪರವರಿಗೆ ಈ ದಾವೆಯಲ್ಲಿ ಸೇರಿಸಿಲ್ಲ, ಆಸ್ತಿಗಳು ಮಂಗೇಶರವರ ಹೆಸರಿನಲ್ಲಿ ಇರುವುದರಿಂದ ಅವರ ಗಂಡು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಕುಸುಮ ಹಾಗೂ ಸ್ವರೂಪ ರವರು 1980 ರ ಪೂರ್ವದಲ್ಲಿ ತೀರಿಕೊಂಡಿದ್ದಾರೆ. ಅವರ ವಾರಸುದಾರರ ಬಗ್ಗೆ ನನಗೆ ಮಾಹಿತಿ ಇಲ್ಲ.

3. ಬಿಕಾಜಿ ಹಾಗೂ ಗಜಾನನ ರವರ ನಡುವೆ ಪಾಲು ವಾಟ್ನಿ ಆಗಿದೆ ಎಂದರೆ ನಿಜ. ಸಾಕ್ಷಿಯು ನಾನು ಹುಟ್ಟುವ ಪೂರ್ವದಲ್ಲಿ 1971 ರಲ್ಲಿ ವಾಟ್ನಿ ಆಗಿತ್ತು ಎಂದು ಹೇಳುತ್ತಾರೆ. ಬಿಕಾಜಿ ಹಾಗೂ ಗಜಾನನ ರವರ ನಡುವೆ 1950 ರ ಪೂರ್ವದಲ್ಲಿ ಪಾಲುವಾಟ್ನಿ ಆಗಿದೆ ಎಂದರೆ ನಿಜ. ಗಜಾನನ ರವರ ವಾರಸುದಾರರು ನಮ್ಮ ಹಾಗೂ ಪ್ರತಿವಾದಿಗಳ ವಿರುದ್ಧ ಒಂದು ದಾವೆಯನ್ನು ಹಾಕಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದಾವೆ ಮೇ-2023 ರಲ್ಲಿ ವಜಾ ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದಾವೆ ಅಸಲ ದಾವಾ ನಂ.49/2021 ರಲ್ಲಿ ನಾನು ನ್ಯಾಯಾಲಯಕ್ಕೆ ಹಾಜರು ಸಹ ಆಗಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ದಾವೆ ನಂ.49/2021 ರಲ್ಲಿ ಹಾಜರಾಗಿ ತಕರಾರನ್ನು ಸಹ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಖುದ್ದಾಗಿ ಹಾಜರು ಆಗಿರಲಿಲ್ಲ ಎಂದು ಹೇಳುತ್ತಾರೆ.

4. 9167062024 ನನ್ನ ಮೊಬೈಲ ಸಂಖ್ಯೆ. ಸಾಕ್ಷಿಯು ವಾದ ಪತ್ರದಲ್ಲಿ ನನ್ನ ಮೊಬೈಲ ಸಂಖ್ಯೆಯನ್ನು ನನ್ನ ಸಹೋದರಿಯ ವಿಳಾಸದಲ್ಲಿ ನಮೂದಿಸಲಾಗಿದೆ ಎಂದು ಹೇಳುತ್ತಾರೆ. ಅಸಲ ದಾವೆ 49/2021 ರ ವಾದ ಪತ್ರದಲ್ಲಿ ವಾದಿ ನಂ.1 ಮತ್ತು 2 ರವರ ವಿಳಾಸ ಸರಿಯಾಗಿ ನಮೂದಿಸಲಾಗಿದೆ. ಅಸಲ ದಾವೆ 49/2021 ರ ನ್ಯಾಯಾಲಯದ ಸಮನ್ಸ ನನಗೆ ಸದರಿ ವಿಳಾಸದ ಮೇಲೆ ಜಾರಿ ಮಾಡಲಾಗಿದೆ ಎಂದರೆ ಸಾಕ್ಷಿಯು ನನಗೆ ನ್ಯಾಯಾಲಯದ ಸಮನ್ಸ ಬಂದಿರಲಿಲ್ಲ ಹಾಗೂ ಜಾರಿ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಅಸಲ ದಾವೆ 49/2021 ರಲ್ಲಿ ಹಾಗೂ ಈ ದಾವೆಯಲ್ಲಿ ಇರುವ ಜಮೀನುಗಳು ಒಂದೇ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿ ಕೊಳ್ಳುತ್ತಾರೆ. ಅಸಲ ದಾವೆ 49/2021 ದಾವೆಯನ್ನು ನಡೆಸದೆ ಇರುವ ಕಾರಣದಿಂದ ನ್ಯಾಯಾಲಯವು ಸದರಿ ದಾವೆಯನ್ನು ವಜಾ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ವಿನಂತಿಯ ಮೇರೆಗೆ ಮುಂದುಡಲಾಯಿತು.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**